**ದಿನಾಂಕಃ 18/07/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:** ಆರೋಪಿತರ **ಪರ ಶ್ರೀ ಕೆ.ಆರ್.ವಿ. ವಕೀಲರಿಂದಃ**

1. ನಾನು ಹುಟ್ಟಿದ ಊರು ಮನುಗನಹಳ್ಳಿ, ನನ್ನನ್ನು ಸುಳೆಕೋಟೆ ಗ್ರಾಮದ ಹುಡುಗನಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ಚಾಸಾ-3 ನನ್ನ ಮಾವ, ಪ್ರಾಸಾ-3 ನನ್ನ ಮೈದುನ. ಪ್ರಾಸಾ-1 ರವರು ಮತ್ತು ಅವರ ಗಂಡ ನಾನು ಮದುವೆಯಾದಾಗಿನಿಂದಲೂ ಸುಳೆಕೋಟೆ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ನಮ್ಮ ಮನೆ ಮತ್ತು ಆರೋಪಿತರ ಮನೆ ಸುಮಾರು 200 ಮೀಟರ್ ಅಂತರದಲ್ಲಿದೆ.

2. ಘಟನಾ ಸ್ಥಳದ ಸೈಟು ನನ್ನ ಮಾವ-ಗಣೇಶರವರ ಹೆಸರಿಗೆ ಸೇರಿದೆ. ಅದಕ್ಕೆ ಆರೋಪಿತರು ತಕರಾರು ಮಾಡಿದ್ದರು, ನಂತರ ಅದು ನ್ಯಾಯಾಲಯದಲ್ಲಿ ಗಣೇಶರವರ ಪರ ಆಗಿರುತ್ತದೆ. ಸದರಿ ವಿಷಯ ನನಗೆ ಖುದ್ದಾಗಿ ಗೊತ್ತು. ಗಣೇಶರವರು ತೀರಿಹೊಗಿ ಎಷ್ಟು ವರ್ಷ ಆಯಿತು ನನಗೆ ಗೊತ್ತಿಲ್ಲ. ಗಣೇಶರವರು ತೀರಿಕೊಳ್ಳುವ ಮುಂಚಿತವಾಗಿ ಅವರಿಗೆ ಸೈಟು ಬಂದಿರುತ್ತದೆ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**